**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 48/2019** **ಪ್ರಾ.ಸಾ –4**
**ಚಾ.ಸಾ – 5**

**ದಿನಾಂಕಃ 30.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಬಿ ವಿ ರಾಜ |
| ತಂದೆಯ ಹೆಸರು | : | ಬಿ ಕೆ ವಿಶ್ವನಾಥ್ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಗೋಣಿಕೊಪ್ಪ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 7 ಎಂದುಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ನಿ ಪಿ 7 ಕ್ಕೆ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಯ Scanning center ಮುಂಭಾಗ ಸಹಿ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿ. 09.10.2018 ರಂದು ಮ. 01.30 ಕ್ಕೆ ಗೋಣಿಕೊಪ್ಪದ ನನ್ನ ಗುಜರಿ ಅಂಗಡಿಯಲ್ಲಿದ್ದೆ ಎಂದರೆ ಸರಿಯಲ್ಲ. ಆಗ ಅಲ್ಲಿಗೆ ಗೋಣಿಕೊಪ್ಪ ಪೊಲೀಸರು ಬಂದು ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಠಾಣೆಯಲ್ಲಿ ಆರೋಪಿಯನ್ನು

ಪೊಲೀಸರು ಬಂದಿಸಿದ್ದರು ಎಂದರೆ ಸರಿಯಲ್ಲ. ಆರೋಪಿ ತೋರಿಸಿಕೊಟ್ಟಂತೆ ಮಹರಜ್ ಮಾಡಲು ನನ್ನನ್ನು ಕೋರಿದರು ಎಂದರೆ ಸರಿಯಲ್ಲ. ರವಿಕಿರಣ್ complex ಬಳಿ ಆರೋಪಿ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಆರೋಪಿ ರವಿಕಿರಣ್ complex ಬಳಿ ಇದ್ದ Coorg diagnostic center ನ ಶೌಚಾಲಯದ ಕಿಟಕಿಯನ್ನು ಆಕ್ಸರ್ ಬ್ಲೇಡ್ ನಿಂದ ಕತ್ತರಿಸಿ ಹಣ ಕಳ್ಳತನ ಮಾಡಿದೆ ಎಂದು ತೋರಿಸಿಕೊಟ್ಟಂತೆ ಮಹಜರ್ ಅನ್ನು 02.00 ರಿಂದ 02.45 ರತನಕ ಮಾಡಿ ನನ್ನ ಮತ್ತು ಚಾಸಾ 4 ರವರ ಸಹಿ ಪಡೆದರು ಎಂದರೆ ಸರಿಯಲ್ಲ.

ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದು ಆ ಹೇಳಿಕೆಯನ್ನು ಓದಿ ಹೇಳಿದ್ದು, ಅದನ್ನು ಅಲ್ಲಗೆಳೆದ ಕಾರಣ ಅದನ್ನು ನಿ. ಪಿ. 8 ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯವಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ. ಬಿ. ಎಸ್ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ